ಕರ್ನಾಟಕ ಸರ್ಕಾರ

# ಉಪನಿರ್ದೇಶಕರು(ಆಡಳಿತ) ರವರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ

ಸಂಖ್ಯೆ: ಸಿ2(1)/ಆಡಳಿತ/ಪ್ರಾಶಾಶಿ/ಪ್ರೌಶಾಶಿ/ಬಡ್ತಿ/188/2020-21 ದಿನಾಂಕ:04.01.2021

## -: ಅಧಿಕೃತ ಜ್ಞಾಪನ :-

ವಿಷಯ :-ಕಲಬುರಗಿ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸೇವಾನಿರತ ತರಬೇತಿ ಹೊಂದಿದ ಪದವೀಧರ ಪ್ರಾಥಮಿಕ ಶಾಲಾ ಸಹ ಶಿಕ್ಷಕರು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಇವರುಗಳಿಗೆ ಮುಂಬಡ್ತಿ ಕೋಟಾದಡಿ ಖಾಲಿ ಇರುವ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗೆ ಅನುಕ್ರಮವಾಗಿ ಸ್ಥಾನಪನ್ನ ಪದೋನ್ನತಿ ನೀಡುವ ಕುರಿತು.

ಉಲ್ಲೇಖ :-1) ಸರಕಾರದ ಅಧಿಸೂಚನೆ ಸಂಖ್ಯೆ: ಇಡಿ 291 ಎಲ್.ಬಿ.ಪಿ. 2015, ದಿನಾಂಕ:29.09.2016 ರನ್ವಯ ರೂಪಿಸಲಾಗಿರುವ ಪ್ರೌಢ ಶಾಲಾ ಶಿಕ್ಷಕರ ವೃಂದ ಹಾಗೂ ನೇಮಕಾತಿ ನಿಯಮಗಳು

2) ದಿನಾಂಕ: 01.01.2020 ರಲ್ಲಿದ್ದಂತೆ ಈ ಕಛೇರಿಯಿಂದ ಪ್ರಕಟಿಸಲಾದ ಜೇಷ್ಠತಾ ಪಟ್ಟಿ ದಿನಾಂಕ: 15.06.2020

3) ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಇವರ ಕಛೇರಿಯ ಸಭಾ ನಡಾವಳಿ ಸಂಖ್ಯೆ:ಸಿ1(1)/ಆಡಳಿತ/ಖಾಲಿಹುದ್ದೆಭರ್ತಿ/25/2020-21, ದಿನಾಂಕ: 14.12.2020

4) ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 19.12.2020

5) ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಇವರ ಕಛೇರಿಯ ಪತ್ರ ಸಂಖ್ಯೆ:ಸಿ1(1)/ಆಡಳಿತ/ಖಾಲಿಹುದ್ದೆಭರ್ತಿ/25/2020-21, ದಿನಾಂಕ: 21.12.2020

6) ತಾತ್ಕಲಿಕ ಅರ್ಹತಾ ಪಟ್ಟಿಯಲ್ಲಿ ಸ್ಥಾನ ಪಡೆದು ಬಡ್ತಿಯನ್ನು ನಿರಾಕರಿಸಿದ/ಮುಂದೂಡಲು ಕೋರಿದ ಶಿಕ್ಷಕರ ಮನವಿಗಳು

7) ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 24.12.2020

8) ಇಲಾಖಾ ಮುಂಬಡ್ತಿ ಸಮಿತಿ ಸಭಾ ನಡುವಳಿ ದಿನಾಂಕ: 24.12.2020

9) ತಾತ್ಕಾಲಿಕ ಕೌನ್ಸಲಿಂಗ್ ಆಧ್ಯತಾ ಪಟ್ಟಿ ಪ್ರಕಟಣೆ ದಿನಾಂಕ: 28.12.2020

10) ತಾತ್ಕಾಲಿಕ ಅಂತಿಮ ಕೌನ್ಸಲಿಂಗ್ ಆಧ್ಯತಾ ಪಟ್ಟಿ ಪ್ರಕಟಣೆ ದಿನಾಂಕ: 28.12.2020

11) ಈ ಕಛೇರಿಯಲ್ಲಿ ನಡೆಸಲಾದ ಕೌನ್ಸಲಿಂಗ್ ದಿನಾಂಕ: 28.12.2020

12) ಈ ಕಛೇರಿಯ ಅಧಿಕೃತ ಜ್ಞಾಪನ ಸಮ ಸಂಖ್ಯೆ ದಿನಾಂಕ:28.12.2020

13) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 57 ಎಸ್.ಆರ್.ಆರ್. 2001 ದಿನಾಂಕ:22.05.2002

14) ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 7422 ಸೇನಿಎ 2014 ದಿನಾಂಕ:22.02.2014

* * * * *

ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಾವಳಿ 1957ರ ನಿಯಮ-10(1) ರನ್ವಯ ಪ್ರತಿ ವರ್ಷದ ಜನೆವರಿ 01ಕ್ಕೆ ಸರ್ಕಾರಿ ನೌಕರರ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಬೇಕಾಗುತ್ತದೆ. ಮುಂದುವರೆದು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು, 2013ರ ನಿಯಮ 7(2) ರನ್ವಯ ಸ್ಥಳೀಯ ವೃಂದದ ಹಾಗೂ ಇದೇ ನಿಯಮಾವಳಿಯ ನಿಯಮ 7(3) ರನ್ವಯ ಉಳಿದ ಮೂಲ ವೃಂದದ ಪ್ರತ್ಯೇಕ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸುವಂತೆ ತಿಳಿಸಲಾಗಿದೆ.

ಅದರಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗಳಿಗೆ ಉಲ್ಲೇಖ (01) ರ ವೃಂದ ಹಾಗೂ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಲಾದ ಶೈಕ್ಷಣಿಕ ಅರ್ಹತೆ ಹೊಂದಿರುವ ಹಾಗೂ ಕನಿಷ್ಠ 5 ವರ್ಷದ ಸೇವೆ ಸಲ್ಲಿಸಿರುವ ತರಬೇತಿ ಹೊಂದಿದ ಪದವೀಧರ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಇವರುಗಳಿಗೆ ಕಲಬುರಗಿ ಜಿಲ್ಲೆಯಲ್ಲಿ ದಿನಾಂಕ:01.01.2020 ರಲ್ಲಿದ್ದಂತೆ 2019ನೇ ಬ್ಲಾಕ್ ಅವಧಿಯಲ್ಲಿ ಅಂದರೆ ದಿನಾಂಕ: 01/01/2019 ರಿಂದ 31/12/2019 ರವರೆಗೆ ಶೈಕ್ಷಣಿಕ ಅರ್ಹತೆ ಪಡೆದಿರುವ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಒಳಗೊಂಡ ಮೆರಿಟ್ ಆಧಾರಿತ ಜೇಷ್ಠತಾ ಪಟ್ಟಿಯನ್ನು ಸಂಬಂಧಿಸಿದ ಶಿಕ್ಷಕರ ಮೂಲ ಸೇವಾ ಪುಸ್ತಕ ಹಾಗೂ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ಮೂಲ ದಾಖಲೆಗಳ ಪರಿಶೀಲನೆಯ ಷರತ್ತಿಗೆ ಒಳಪಟ್ಟು, ಉಲ್ಲೇಖ (02) ರನ್ವಯ ಪ್ರಕಟಿಸಲಾಗಿತ್ತು.

ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 14.12.2020 ರಂದು ನಡೆದ ವೆಬಿನಾರ್ ಸಭೆಯಲ್ಲಿ ಚರ್ಚಿಸಿ ನಿರ್ಧರಿಸಿದಂತೆ ಮುಂಬಡ್ತಿ ಕೋಟಾದ ಅಡಿಯಲ್ಲಿ ಖಾಲಿಯಿರುವ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗಳಿಗೆ ದಿನಾಂಕ: 01.01.2020 ರಲ್ಲಿದ್ದಂತೆ ಪ್ರಕಟಿಸಲಾದ ಜೇಷ್ಠತಾ ಪಟ್ಟಿಯಿಂದ ದಿನಾಂಕ: 31.12.2020 ರಲ್ಲಿದ್ದಂತೆ 'ಸಿ' ವಲಯದ ಖಾಲಿ ಹುದ್ದೆಗಳಿಗೆ ಮುಂಬಡ್ತಿ ನೀಡಲು ಉಲ್ಲೇಖ (03) ಹಾಗೂ (05) ರನ್ವಯ ಸೂಚಿಸಲಾಗಿದೆ.

ಅದರಂತೆ ಈ ಜಿಲ್ಲೆಯಲ್ಲಿ ಮುಂಬಡ್ತಿ ಕೋಟಾದಡಿಯಲ್ಲಿ ವಿವಿಧ ವಿಷಯ ಹಾಗೂ ಮಾಧ್ಯಮದ ಸ್ಥಳೀಯ ವೃಂದ ಮತ್ತು ಉಳಿದ ಮೂಲ ವೃಂದದ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ವೃಂದದ 'ಸಿ' ವಲಯದಲ್ಲಿ ಖಾಲಿಯಿರುವ ಹುದ್ದೆಗಳನ್ನು ಆಧಾರಿಸಿ ಉಲ್ಲೇಖ (04) ರನ್ವಯ ಹೊರಡಿಸಲಾದ ಅಧಿಸೂಚನೆಯ ಮೇರೆಗೆ ಉಲ್ಲೇಖ (02) ರನ್ವಯ ಪ್ರಕಟಿಸಲಾದ ಜೇಷ್ಠತಾ ಪಟ್ಟಿಯಿಂದ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಸಿದ್ದಪಡಿಸಿ ಪ್ರಕಟಿಸಿದ ನಂತರ ಸದರಿ ತಾತ್ಕಾಲಿಕ ಅರ್ಹತಾ ಪಟ್ಟಿಗೆ ಏನಾದರೂ ಆಕ್ಷೇಪಣೆ ಇದ್ದಲ್ಲಿ ನಿಗದಿಪಡಿಸಲಾದ ದಿನಾಂಕದೊಳಗೆ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಕಾಲಾವಕಾಶ ನೀಡಲಾಗಿತ್ತು. ಮುಂದುವರೆದು ಸದರಿ ತಾತ್ಕಾಲಿಕ ಅರ್ಹತಾ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿರುವ ಶಿಕ್ಷಕರ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ಮೂಲ ದಾಖಲೆಗಳ ಪರಿಶೀಲನೆಯನ್ನು ಸಹ ನಡೆಸಲಾಗಿದೆ.

ಸಂಬಂಧಿಸಿದ ಶಿಕ್ಷಕರಿಂದ ಸಲ್ಲಿಸಲಾಗಿರುವ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಹಾಗೂ ಸದರಿ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿರುವ ಶಿಕ್ಷಕರಿಂದ ಬಡ್ತಿಯನ್ನು ಮುಂದೂಡುವ/ನಿರಾಕರಿಸುವ ಕುರಿತು ಸಲ್ಲಿಸಲಾಗಿರುವ ಮನವಿಗಳನ್ನು ಪರಿಶೀಲಿಸಿ ಉಲ್ಲೇಖ (07) ರನ್ವಯ ತಾತ್ಕಾಲಿಕ ಅಂತಿಮ ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಸದರಿ ತಾತ್ಕಾಲಿಕ ಅಂತಿಮ ಅರ್ಹತಾ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿರುವ ಶಿಕ್ಷಕರಿಗೆ ಆಯಾ ವಿಷಯ ಹಾಗೂ ಮಾಧ್ಯಮದ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2/ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ವೃಂದ ಹುದ್ದೆಗೆ ಮುಂಬಡ್ತಿ ನೀಡಲು ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸಲ್ಲಿಸಲಾಗಿರುವ ಪ್ರಸ್ತಾವನೆ, 05 ವರ್ಷಗಳ ಕಾರ್ಯನಿರ್ವಹಣಾ ವರದಿಗಳು ಹಾಗೂ ಶಿಸ್ತು ಪ್ರಕರಣ ಬಾಕಿ ಇರದೇ ಇರುವ ಕುರಿತು ದೃಢೀಕರಣವನ್ನು ಸ್ವೀಕರಿಸಿ ಈ ಎಲ್ಲಾ ದಾಖಲೆಗಳು ಮತ್ತು ಸಂಬಂಧಿಸಿದ ಶಿಕ್ಷಕರ ಮೂಲ ಸೇವಾ ಪುಸ್ತಕಗಳನ್ನು ಪರಿಶೀಲಿಸಿ ಪ್ರಚಲಿತ ಪ್ರೌಢ ಶಾಲಾ ಸಹ ಶಿಕ್ಷಕರ ವೃಂದ ಹಾಗೂ ನೇಮಕಾತಿ ನಿಯಮಗಳನ್ವಯ ಮುಂಬಡ್ತಿಗಾಗಿ ನಿಗದಿಪಡಿಸಲಾದ ಕನಿಷ್ಠ 05 ವರ್ಷ ಸೇವೆ ಸಲ್ಲಿಸಿರುವ ಅಂಶವನ್ನು ಪರಿಶೀಲಿಸಿ ಉಲ್ಲೇಖ (08) ರನ್ವಯ ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯಲ್ಲಿ ಅರ್ಹ ಶಿಕ್ಷಕರಿಗೆ ಮುಂಬಡ್ತಿ ನೀಡಲು ತೀರ್ಮಾನಿಸಿ ಉಲ್ಲೇಖ (11) ರನ್ವಯ ಕೌನ್ಸಲಿಂಗ್ ನಡೆಸಿ ಉಲ್ಲೇಖ (12) ರನ್ವಯ ಮುಂಬಡ್ತಿ ನೀಡಲಾಗಿದೆ.

ಸದರಿ ಮುಂಬಡ್ತಿ ಪ್ರಕ್ರೀಯೆಯಲ್ಲಿ ಈ ಕೆಳಕಂಡ ಶಿಕ್ಷಕರು ಮುಂಬಡ್ತಿಯನ್ನು ನಿರಾಕರಿಸಿ/ಮುಂದೂಡುವಂತೆ ಹಾಗೂ ಮೂಲ ಪ್ರಮಾಣ ಪತ್ರಗಳ ಪರಿಶೀಲನೆಗೆ/ಕೌನ್ಸಲಿಂಗೆ ಗೈರು ಹಾಜರಾಗಿರುತ್ತಾರೆ. ಬಡ್ತಿಯನ್ನು ನಿರಾಕರಿಸಿದ ಹಾಗೂ ಮುಂದೂಡಲು ಕೋರಿ ಸಲ್ಲಿಸಿದ ಮನವಿಗಳನ್ನು ಪರಿಶೀಲಿಸಿ ಮತ್ತು ಮೂಲ ಪ್ರಮಾಣ ಪತ್ರಗಳ ಪರಿಶೀಲನೆಗಾಗಿ ಹಾಗೂ ಕೌನ್ಸಲಿಂಗ್‌ಗೆ ಗೈರು ಹಾಜರಾದ ಶಿಕ್ಷಕರು ಬಡ್ತಿಯನ್ನು ನಿರಾಕರಿಸಿರುತ್ತಾರೆಂದು ಭಾವಿಸಿ ಬಡ್ತಿ ಪ್ರಕ್ರೀಯೆಯಿಂದ ಕೈಬಿಡಲಾಗಿದೆ.

| ಕ್ರಸಂ. | ಜೇಷ್ಠತಾ ಸಂಖ್ಯೆ | ಶಿಕ್ಷಕರ ಹೆಸರು, ಕಾರ್ಯನಿರ್ವಹಿಸುತ್ತಿರುವ ಸ್ಥಳ, ತಾಲೂಕು, ಜಿಲ್ಲೆ ಶ್ರೀ/ಶ್ರೀಮತಿ | ವಿಷಯ / ಮಾಧ್ಯಮ | ಷರಾ |
|---|---|---|---|---|
| 1 | 36 | ಗೀತಾಬಾಯಿ, ಸ.ಹಿ.ಪ್ರಾ.ಶಾಲೆ ಕೇಳಗೇರಾ, ತಾ.ಚಿತ್ತಾಪೂರ | ಕಲಾ (ಕನ್ನಡ) | ಗೈರು ಹಾಜರಿ |
| 2 | 51 | ಅನ್ನಪೂರ್ಣ, ಸ.ಹಿ.ಪ್ರಾ.ಶಾಲೆ ಆಸಿಫ್‌ಗಂಜ್, ಕಲಬುರಗಿ ಉತ್ತರ | ಕಲಾ (ಕನ್ನಡ) | ನಿರಾಕರಣೆ |
| 3 | 58 | ಸುಮೀತಾ, ಸ.ಹಿ.ಪ್ರಾ.ಶಾಲೆ ಯಳವಂತಗಿ(ಕೆ), ಕಲಬುರಗಿ ದಕ್ಷಿಣ | ಕಲಾ (ಕನ್ನಡ) | ನಿರಾಕರಣೆ |
| 4 | 61 | ಜಯಶ್ರೀ, ಸ.ಹಿ.ಪ್ರಾ.ಶಾಲೆ ಕಲಬೇನೂರ, ಕಲಬುರಗಿ ದಕ್ಷಿಣ | ಕಲಾ (ಕನ್ನಡ) | ನಿರಾಕರಣೆ |
| 5 | 62 | ಪ್ರಮೀಳಾ, ಸ.ಹಿ.ಪ್ರಾ.ಶಾಲೆ ಉಪಳಾಂವ, ಕಲಬುರಗಿ ಉತ್ತರ | ಕಲಾ (ಕನ್ನಡ) | ಗೈರು ಹಾಜರಿ |
| 6 | 4 | ನೂರ್ ಜಹಾನ್ ಬೇಗಂ, ಸ.ಹಿ.ಪ್ರಾ.ಶಾಲೆ ಉರ್ದು ಖಾಜಾ ಕಾಲನಿ, ರೋಜಾ (ಬಿ), ಕಲಬುರಗಿ ಉತ್ತರ | ಕಲಾ (ಉರ್ದು) | ನಿರಾಕರಣೆ |
| 7 | 7 | ರುಖಸಾನಾ ಬೇಗಂ, ಸ.ಹಿ.ಪ್ರಾ. (ಉರ್ದು) ಶಾಲೆ ಲೋವರ ಮಡ್ಡಿ ಶಹಾಬಾದ ತಾ.ಚಿತ್ತಾಪೂರ | ಕಲಾ (ಉರ್ದು) | ನಿರಾಕರಣೆ |
| 8 | 25 | ಚಂದ್ರಶೇಖರ ಕಟ್ಟಿಮನಿ, ಸ.ಹಿ.ಪ್ರಾ.ಶಾಲೆ ನಿರಗುಡಿ, ತಾ.ಆಳಂದ | ಕಲಾ (ಕನ್ನಡ) | ನಿರಾಕರಣೆ |
| 9 | 41 | ವಿಜಯಾ ಎಂ, ಸ.ಹಿ.ಪ್ರಾ.ಶಾಲೆ ಮರಗುತ್ತಿ, ಕಲಬುರಗಿ ಉತ್ತರ | ಪಿಸಿಎಂ (ಕನ್ನಡ) | ನಿರಾಕರಣೆ |
| 10 | 42 | ನವನಾಥ, ಸ.ಮಾ.ಪ್ರಾ.ಶಾಲೆ ಸಾವಳಗಿ(ಬಿ), ಕಲಬುರಗಿ ಉತ್ತರ | ಪಿಸಿಎಂ (ಕನ್ನಡ) | ನಿರಾಕರಣೆ |
| 12 | 35 | ಮೀನಾಕ್ಷಿ, ಸ.ಹಿ.ಪ್ರಾ.ಶಾಲೆ ಸರಡಗಿ(ಬಿ) ಕಲಬುರಗಿ ದಕ್ಷಿಣ | ಪಿಸಿಎಂ (ಕನ್ನಡ) | ನಿರಾಕರಣೆ |
| 13 | 39 | ಲೀಲಾವತಿ, ಸ.ಹಿ.ಪ್ರಾ.ಶಾಲೆ ಫೀರೋಜಾಬಾದ ತಾ.ಕಲಬುರಗಿ ದಕ್ಷಿಣ | ಕನ್ನಡ ಭಾಷೆ | ಗೈರು ಹಾಜರಿ |
| | | | ಕನ್ನಡ ಭಾಷೆ | ನಿರಾಕರಣೆ |

| | | | | |
|---|---|---|---|---|
| 14 | 40 | ವಿದ್ಯಾ, ಸ.ಹಿ.ಪ್ರಾ.ಶಾಲೆ ಹದನೂರ, ತಾ.ಚಿತ್ತಾಪೂರ | ಕನ್ನಡ ಭಾಷೆ | ನಿರಾಕರಣೆ |
| 15 | 45 | ರಾಜೇಶ್ವರಿ, ಸ.ಹಿ.ಪ್ರಾ.ಶಾಲೆ ವಿಜಯನಗರ ಕಾಲನಿ ಕಲಬುರಗಿ ಉತ್ತರ | ಕನ್ನಡ ಭಾಷೆ | ನಿರಾಕರಣೆ |
| 16 | 47 | ಅಕ್ಕಮಹಾದೇವಿ ಡೋಣಿ, ಸ.ಕಿ.ಪ್ರಾ.ಶಾಲೆ ಕಮಲಾನಗರ ತಾ.ಕಲಬುರಗಿ ಉತ್ತರ | ಕನ್ನಡ ಭಾಷೆ | ನಿರಾಕರಣೆ |
| 17 | 51 | ಸುನಂದಾ ಮಠ, ಕೆ.ಪಿ.ಎಸ್. ಕರ್ಜಗಿ, ತಾ.ಅಫಜಲಪೂರ | ಕನ್ನಡ ಭಾಷೆ | ನಿರಾಕರಣೆ |
| 18 | 53 | ಭಾಗ್ಯಶಿಲ್ಪಾ, ಸ.ಮಾ.ಪ್ರಾ.ಶಾಲೆ ಮಾಶಾಳ, ತಾ.ಅಫಜಲಪೂರ | ಕನ್ನಡ ಭಾಷೆ | ನಿರಾಕರಣೆ |
| 19 | 87 | ರಾಗಿಣಿ, ಸ.ಹಿ.ಪ್ರಾ.ಶಾಲೆ ಮೀನಹಾಬಾಳ, ತಾ.ಸೇಡಂ | ಕನ್ನಡ ಭಾಷೆ | ಗೈರು ಹಾಜರಿ |
| 20 | 105 | ಕವಿತಾ ಗಂಗೋಟಗಿ, ಸ.ಹಿ.ಪ್ರಾ.ಶಾಲೆ ಗುಡುರ ಎಸ್.ಎ. ತಾ.ಜೇವರ್ಗಿ | ಕನ್ನಡ ಭಾಷೆ | ನಿರಾಕರಣೆ |
| 21 | 54 | ತನುಜಾ, ಬಿ.ಆರ್.ಸಿ., ಬಿ.ಆರ್.ಪಿ. ಕಲಬುರಗಿ ಉತ್ತರ | ಆಂಗ್ಲ ಭಾಷೆ | ನಿರಾಕರಣೆ |
| 22 | 61 | ಬಸವರಾಜ, ಸ.ಹಿ.ಪ್ರಾ.ಶಾಲೆ ಅರ್ಜುಣಗಿ, ತಾ.ಅಫಜಲಪೂರ | ಆಂಗ್ಲ ಭಾಷೆ | ನಿರಾಕರಣೆ |
| 23 | 68 | ಶೋಭಾ, ಸ.ಹಿ.ಪ್ರಾ.ಶಾಲೆ ಕಪನೂರ, ತಾ.ಕಲಬುರಗಿ ಉತ್ತರ | ಆಂಗ್ಲ ಭಾಷೆ | ನಿರಾಕರಣೆ |
| 24 | 79 | ಸೈದಾ ಮೇಹೆರನಾಜ, ಸ.ಹಿ.ಪ್ರಾ.ಉರ್ದು ಶಾಲೆ ಶಹಾಬಾದ, ತಾ.ಚಿತ್ತಾಪೂರ | ಆಂಗ್ಲ ಭಾಷೆ | ನಿರಾಕರಣೆ |
| 25 | 86 | ಮಹಾದೇವಿ, ಸ.ಹಿ.ಪ್ರಾ.ಶಾಲೆ ದೇಗಲಮಡಿ, ತಾ.ಚಿಂಚೋಳಿ | ಆಂಗ್ಲ ಭಾಷೆ | ನಿರಾಕರಣೆ |
| 26 | 93 | ರೇಷ್ಮಾ, ಸ.ಹಿ.ಪ್ರಾ.ಉರ್ದು ಶಾಲೆ (ಬಾಲಕರ) ಚಿತ್ತಾಪೂರ | ಆಂಗ್ಲ ಭಾಷೆ | ನಿರಾಕರಣೆ |
| 27 | 95 | ಶಿವಾಜಿ, ಸ.ಹಿ.ಪ್ರಾ.ಶಾಲೆ ಹೊನ್ನಕಿರಣಗಿ ತಾ.ಕಲಬುರಗಿ ದಕ್ಷಿಣ | ಆಂಗ್ಲ ಭಾಷೆ | ನಿರಾಕರಣೆ |
| 28 | 133 | ಸುವರ್ಣಲತಾ, ಸ.ಕಿ.ಪ್ರಾ.ಶಾಲೆ ಹಾದಿಬಸವಣ್ಣ ಶರಣಶಿರಸಗಿ ತಾ.ಕಲಬುರಗಿ ದಕ್ಷಿಣ | ಆಂಗ್ಲ ಭಾಷೆ | ನಿರಾಕರಣೆ |
| 29 | 39 | ರಮೇಶ, ಸ.ಹಿ.ಪ್ರಾ.ಶಾಲೆ ವೆಂಕಟಬೇನೂರ, ತಾ.ಕಲಬುರಗಿ ಉತ್ತರ | ಹಿಂದಿ ಭಾಷೆ | ನಿರಾಕರಣೆ |
| 30 | 42 | ಸಂಗಮ್ಮ, ಸಿ.ಪಿ.ಎಸ್ ಆಳಂದ | ಹಿಂದಿ ಭಾಷೆ | ನಿರಾಕರಣೆ |
| 31 | 46 | ಲಚಮಪ್ಪಾ ನಾಯಕ, ಸ.ಹಿ.ಪ್ರಾ.ಶಾಲೆ ದೇಗಾಂವ, ತಾ.ಆಳಂದ | ಹಿಂದಿ ಭಾಷೆ | ಗೈರು ಹಾಜರಿ |
| 32 | 59 | ತಬಾಸುಮ, ಸ.ಹಿ.ಪ್ರಾ.ಶಾಲೆ ಬಟ್ಟರಗಾ ತಾ.ಆಳಂದ | ಹಿಂದಿ ಭಾಷೆ | ನಿರಾಕರಣೆ |
| 33 | 60 | ಉಷಾಕುಮಾರಿ, ಬಿ.ಆರ್.ಪಿ., ಬಿ.ಆರ್.ಸಿ. ಕಲಬುರಗಿ ಉತ್ತರ | ಹಿಂದಿ ಭಾಷೆ | ನಿರಾಕರಣೆ |
| 34 | 67 | ಸರಸ್ವತಿ, ಸ.ಕಿ.ಪ್ರಾ.ಶಾಲೆ ಭೀಮನಗರ ಕಡಗಂಚಿ, ತಾ.ಆಳಂದ | ಹಿಂದಿ ಭಾಷೆ | ನಿರಾಕರಣೆ |
| 35 | 4 | ಜೇರಾ ಜಬೀನ್, ಸ.ಹಿ.ಪ್ರಾ.ಉರ್ದು ನಿಜಾಮಪೂರ ತಾ.ಕಲಬುರಗಿ ಉತ್ತರ | ಉರ್ದು ಭಾಷೆ | ನಿರಾಕರಣೆ |
| 36 | 4 | ಗಣೇಶಕುಮಾರ ಎನ್, ಸ.ಹಿ.ಪ್ರಾ.ಶಾಲೆ ಕುಣಿಸಂಗಾವಿ, ತಾ.ಆಳಂದ | ದೈ.ಶಿ.ಶಿ. | ನಿರಾಕರಣೆ |
| 37 | 7 | ಜಗನ್ನಾಥ, ಸ.ಹಿ.ಪ್ರಾ.ಶಾಲೆ ಹಳೇವಾಡಿ, ತಾ.ಆಳಂದ | ದೈ.ಶಿ.ಶಿ. | ನಿರಾಕರಣೆ |

ಸಂಬಂಧಿಸಿದ ಶಿಕ್ಷಕರ ಕೋರಿಕೆಯನ್ನು ಉಲ್ಲೇಖ (13)ರ ಅಧಿಸೂಚನೆಯಲ್ಲಿ ಹಾಗೂ ಉಲ್ಲೇಖ (14)ರ ಸರ್ಕಾರಿ ಪತ್ರದಲ್ಲಿ ವಿಷದಪಡಿಸಿರುವಂತೆ, ಕರ್ನಾಟಕ ನಾಗರೀಕ ಸೇವಾ ನಿಯಮ (ಸಾಮಾನ್ಯ ನೇಮಕಾತಿ ನಿಯಮಗಳು) 1977ರ ನಿಯಮ 4(ಎ) ರಂತೆ ಪರಗಣಿಸಿ ಸದರಿ ಶಿಕ್ಷಕರಿಗೆ **ಒಂದು ವರ್ಷ ಅಂದರೆ ದಿನಾಂಕ:27/12/2021 ರವರೆಗೆ ಅಥವಾ ಮುಂದೇ ನೀಡುವ ಪದೋನ್ನತ್ತಿ ಇದರಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ** ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯಲ್ಲಿ ಮುಂದುವರೆಯಲು ಅನುಮತಿಸಲಾಗಿದೆ. ಸದರಿ ಅವಧಿಯಲ್ಲಿ ಈ ಶಿಕ್ಷಕರು ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್–2 /ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–1 ಹುದ್ದೆಯ ಮುಂಬಡ್ತಿಗೆ ಅರ್ಹತೆ ಹೊಂದಿರುವುದಿಲ್ಲ. ಈ ವಿಷಯವನ್ನು ಸಂಬಂಧಿತ ಶಿಕ್ಷಕರ ಸೇವಾ ಪುಸ್ತಕದಲ್ಲಿ ದಾಖಲಿಸಲು ಹಾಗೂ ಇದರಂತೆ ನಿಯಮನುಸಾರ ಕ್ರಮವಹಿಸುವಂತೆ ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿದೆ.

ಉಪನಿರ್ದೇಶಕರು (ಆಡಳಿತ)

**ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ**

**ಇವರಿಗೆ,**

1) ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
2) ಸಂಬಂಧಿಸಿದ ಶಿಕ್ಷಕರಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)

**ಪ್ರತಿಯನ್ನು:–**

1) ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಇವರ ಮಾಹಿತಿಗಾಗಿ.
2) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಕಲಬುರಗಿ ಇವರ ಮಾಹಿತಿಗಾಗಿ.
3) ಕಛೇರಿ ಕಡತಕ್ಕೆ